**5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ (ಪೀಠಾಸೀನ, ಸಾಗರ)**

**ಎಸ್.ಸಿ. ಸಂಃ 10006/2023**

ಪಿಡಬ್ಲ್ಯೂ- 4

ಸಿಡಬ್ಲ್ಯೂ- 4

| | |
|---|---|
| ಸಾಕ್ಷಿ ಹೆಸರು | - ಶ್ರೀಧರ್ |
| ತಂದೆ ಹೆಸರು | - ಲೋಕೇಶ್ ವೈ ಬಿ |
| ವಯಸ್ಸು | - 30 ವರ್ಷ |
| ಉದ್ಯೋಗ | - ಖಾಸಗಿ ಕಂಪನಿಯಲ್ಲಿ ಕೆಲಸ |
| ವಾಸಃ | - ಬೆಂಗಳೂರು |

**ಪ್ರಮಾಣ ವಚನ ಭೋದಿಸಿದ ದಿನಾಂಕಃ 18-07-2025.**

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ**

ಚಾಸಾ1 ನನ್ನ ಅಣ್ಣ, ಚಾಸಾ2 ಮತ್ತು ಚಾಸಾ3 ನನ್ನ ತಂದೆ ತಾಯಿ. ಚಾಸಾ6 ನನ್ನ ಚಿಕ್ಕಪ್ಪ. ಚಾಸಾ5 ರವರ ಮನೆ ನಮ್ಮ ಮನೆಯಿಂದ 2 ಮನೆ ಆದ ಮೇಲೆ ಇರುತ್ತದೆ, ಅವರು ಪರಿಚಯ ಇರುತ್ತಾರೆ. ಆರೋಪಿತರು ಪರಿಚಯ ಇರುತ್ತಾರೆ.

ನಮ್ಮ ಮನೆ ಮತ್ತು ಆರೋಪಿತರ ಮನೆ ಮಧ್ಯದಲ್ಲಿ ಖಾಲಿ ಜಾಗ ಇರುತ್ತದೆ. ಆ ಜಾಗದ ವಿಚಾರವಾಗಿ ನಮಗೂ ಮತ್ತು ಆರೋಪಿತರಿಗೂ ಸ್ವಲ್ಪ ತಕರಾರು ಇತ್ತು. ದಿನಾಂಕಃ 06-03-2022 ರಂದು ಸಂಜೆ 5-00 ಗಂಟೆಗೆ ನಾನು ಕನ್ನಪ್ಪರವರ ಮನೆಗೆ ಹೋಗಿ ಕನ್ನಪ್ಪರವರ ಜೊತೆ ಮಾತನಾಡುತ್ತಿದ್ದಾಗ ನಮ್ಮ ಮನೆಯ ಹಿಂಭಾಗದಿಂದ ಗಲಾಟೆ ಶಬ್ದ ಕೇಳಿಸಿತು. ಆಗ ನಾನು ಮತ್ತು ಕನ್ನಪ್ಪ ತಕ್ಷಣ ಸ್ಥಳಕ್ಕೆ ಬಂದೆವು. ನಾವಿಬ್ಬರೂ ಸ್ಥಳಕ್ಕೆ

ಬರುವಷ್ಟರಲ್ಲಿ 1 ನೇ ಆರೋಪಿ ಅರುಣ ಕತ್ತಿಯಿಂದ ನನ್ನ ಅಣ್ಣ ಚಾಸಾ1 ರವರಿಗೆ ತಲೆಯ ಎಡಭಾಗಕ್ಕೆ ಹೊಡೆದ. ಆಗ ನನ್ನ ತಂದೆ ಚಾಸಾ2 ರವರು ಗಲಾಟೆ ಬಿಡಿಸಲು ಸ್ಥಳಕ್ಕೆ ಬಂದರು. 1 ನೇ ಆರೋಪಿ ಅದೇ ಕತ್ತಿಯಿಂದ ನನ್ನ ತಂದೆ ಚಾಸಾ2 ರವರಿಗೆ ಎಡಭಾಗದ ಕುತ್ತಿಗೆಗೆ ಮತ್ತು ಭುಜಕ್ಕೆ ಹೊಡೆದನು. 1 ನೇ ಆರೋಪಿ ಅರುಣ ಕತ್ತಿಯಿಂದ ನನ್ನ ಅಣ್ಣನ ತಲೆಯ ಎಡಭಾಗಕ್ಕೆ ಹೊಡೆದಿದ್ದರಿಂದ ತಲೆ ಸೀಳಿ ಹೋಗಿತ್ತು. ಆ ಸಮಯಕ್ಕೆ ನನ್ನ ಚಿಕ್ಕಪ್ಪ ಚಾಸಾ 6 ರವರು ಸ್ಥಳಕ್ಕೆ ಬಂದರು. ಊರಿನವರು ಸಹ ಸ್ಥಳಕ್ಕೆ ಬಂದರು. ನಂತರ ನಾನು, ಚಾಸಾ6 ಮತ್ತು ಊರಿನವರು ಸೇರಿಕೊಂಡು ಗಲಾಟೆಯನ್ನು ಬಿಡಿಸಿದೆವು. ಆಗ 1 ನೇ ಆರೋಪಿ ಕತ್ತಿಯನ್ನು ಅಲ್ಲೇ ಬಿಸಾಡಿ ನನ್ನ ತಂದೆ ಮತ್ತು ನನ್ನ ಅಣ್ಣನಿಗೆ ಈ ಸಲ ತಪ್ಪಿಸಿಕೊಂಡಿದ್ದೀರಾ ಮತ್ತೆ ಸಿಕ್ಕರೆ ಬಿಡುವುದಿಲ್ಲ, ಸಾಯಿಸಿಬಿಡುತ್ತೇನೆ ಎಂದು ಹೇಳಿದನು. ನಂತರ ನಾವು ನನ್ನ ಅಣ್ಣ ಮತ್ತು ತಂದೆಯವರನ್ನು ಸೊರಬದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು. 1 ನೇ ಆರೋಪಿ ಕೊಲೆ ಮಾಡುವ ಉದ್ದೇಶದಿಂದ ನನ್ನ ಅಣ್ಣ ಮತ್ತು ತಂದೆಯವರಿಗೆ ಕತ್ತಿಯಿಂದ ಹಲ್ಲೆ ಮಾಡಿರುತ್ತಾನೆ.

1 ನೇ ಆರೋಪಿ ಹಲ್ಲೆ ಮಾಡಲು ಉಪಯೋಗಿಸಿದ ಕತ್ತಿಯನ್ನು ನೋಡಿದರೆ ಗುರುತಿಸಬಲ್ಲೆ. ಅದನ್ನು ಈಗ ನೋಡುತ್ತಿದ್ದು ಕತ್ತಿಯನ್ನು ಈಗಾಗಲೇ ಮು ಮಾ 4 ಎಂದು ಗುರುತಿಸಲಾಗಿದೆ. ಈ ಘಟನೆ ಬಗ್ಗೆ ನನ್ನ ಅಣ್ಣ ಚಾಸಾ1 ರವರು ಪೋಲೀಸರಿಗೆ ದೂರು ನೀಡಿರುತ್ತಾರೆ. ನನ್ನ ಅಣ್ಣದೂರು ಕೊಟ್ಟ ಮೇಲೆ ಪೋಲೀಸರು ನನ್ನನ್ನು ವಿಚಾರಿಸಿ ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ. ಆ ದಿವಸ ಗಲಾಟೆ ಮಾಡಿದ ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ. ಆರೋಪಿತರು ಈ ದಿವಸ ನ್ಯಾಯಾಲಯದ ಮುಂದೆ ಇರುತ್ತಾರೆ. ಸಾಕ್ಷಿ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಗಲಾಟೆಯಾದ ಸಮಯದಲ್ಲಿ ನನ್ನ ಅಮ್ಮ ಸದರಿ ಸ್ಥಳದಲ್ಲಿ ಸಗಣಿ ಸಾರಿಸುತ್ತಿದ್ದರು. ಆ ಸಮಯದಲ್ಲಿ 1 ನೇ ಆರೋಪಿ ನನ್ನ ತಾಯಿ ಬಳಿ ಹೋಗಿ ಅವಾಚ್ಯ ಶಬ್ದಗಳಿಂದ ಅಂದರೆ ಸೂಳೆ ಮುಂಡೆ, ಬೋಳಿ ಮುಂಡೆ ಎಂದು ಬೈದಿರುತ್ತಾನೆ. ಆ ಸಮಯಕ್ಕೆ ನನ್ನ ಅಣ್ಣ ಚಾಸಾ1 ರವರು ಸ್ಥಳಕ್ಕೆ ಬಂದು ನನ್ನ ತಾಯಿಗೆ

ಯಾಕೆ ಬೈಯುತ್ತಿದ್ದೀಯ ಎಂದು 1 ನೇ ಆರೋಪಿಯನ್ನು ಕೇಳಿದರು. ಆಗ 1 ನೇ ಆರೋಪಿ ನನ್ನ ಅಣ್ಣನಿಗೆ ಚಾಸಾ1 ರವರಿಗೆ ಹೊಡೆದಿರುತ್ತಾನೆ. ಆಗ ನನ್ನ ತಂದೆ ಬಿಡಿಸಲು ಬಂದಾಗ 2 ನೇ ಆರೋಪಿ ನನ್ನ ತಂದೆಗೆ ಕೈಯಿಂದ ಹೊಡೆದಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಈ ಎನ್ ವಕೀಲರಿಂದಃ**

ನಾನು ಸಿದ್ದಾಪುರದ ಡಿಪ್ಲೊಮಾ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ ಎಂದರೆ ಸರಿ. ಮು ಮಾ 3 ನನ್ನ ಸ್ಕೂಲ್ ಯೂನಿಫಾರ್ಮ್ ಎಂದರೆ ಸರಿ. ಗಲಾಟೆ ಆಗಿದೆ ಎಂದು ಹೇಳಲಾದ ಸಮಯದಲ್ಲಿ ನಾನು ಕನ್ನಪ್ಪರವರ ಮನೆಯಲ್ಲಿ ಇದ್ದೆ ಎಂದರೆ ಸಾಕ್ಷಿ ನಾನು ಅವರ ಮನೆಯ ಹಿಂಭಾಗದಲ್ಲಿ ಇದ್ದೆ ಎಂದು ಹೇಳುತ್ತಾರೆ. ನಮ್ಮ ಬೀದಿಯಲ್ಲಿರುವ ಎಲ್ಲಾ ಮನೆಗಳು ಸರ್ಕಾರಿ ಜಾಗದಲ್ಲಿ ಇರುತ್ತವೆ ಎಂದರೆ ಸರಿ. ನಮ್ಮ ಮನೆಯ ಹಿಂಭಾಗದ ಜಾಗದಲ್ಲಿ ನಾವು ಬೋರ್ ಕೊರೆಸಿದ್ದೆವು, ಆಗ ಆರೋಪಿತರು ನಮ್ಮ ಜಾಗದಲ್ಲಿ ನೀವ್ಯಾಕೆ ಬೋರ್ ಕೊರೆಸಿದ್ದೀರಾ ಎಂದು ತಕರಾರು ಮಾಡಿದ್ದರು ಎಂದರೆ ಸರಿ. ಸ್ಥಳಕ್ಕೆ ಆ ದಿವಸ ಸುಮಾರು 10–12 ಜನ ಊರಿನವರು ಬಂದಿದ್ದರು. ನಮ್ಮ ಮನೆ ಮತ್ತು ಆರೋಪಿತರ ಮನೆ ಎದುರುಗಡೆ ಇರುವ ರಸ್ತೆಯಲ್ಲಿ ಯಾವಾಗಲೂ ಜನರು ಓಡಾಡುತ್ತಾರೆ ಎಂದರೆ ಸರಿ. 1 ಮತ್ತು 2 ನೇ ಆರೋಪಿ ನನ್ನ ತಂದೆ ಮತ್ತು ಅಣ್ಣನ ಮೇಲೆ ಯಾವುದೇ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಮು ಮಾ 4 ರೀತಿ ಕತ್ತಿ ಸಾಮಾನ್ಯವಾಗಿ ಎಲ್ಲಾ ರೈತರ ಮನೆಗಳಲ್ಲೂ ಇರುತ್ತದೆ ಎಂದರೆ ಸರಿ. ಮುದ್ದೆ ಮಾಲು 4 ಹೊಸ ಕತ್ತಿ ಎಂದರೆ ಸಾಕ್ಷಿ ಇದೇ ಕತ್ತಿಯಿಂದಲೇ 1 ನೇ ಆರೋಪಿ ಹಲ್ಲೆ ಮಾಡಿರುತ್ತಾನೆ ಎಂದು ಹೇಳುತ್ತಾರೆ. ಮು ಮಾ 4 ಕತ್ತಿಯಿಂದಲೇ 1 ನೇ

ಆರೋಪಿ ಹಲ್ಲೆ ಮಾಡಿರುತ್ತಾನೆ ಎಂದು ಹೇಳಲು ಯಾವುದಾದರೂ ವಿಶೇಷವಾದ ಗುರುತು ಇಟ್ಟುಕೊಂಡಿದ್ದೀರಾ ಎಂದರದೆ ಸಾಕ್ಷಿ ಮರದ ಹಿಡಿಕೆಯನು ನೋಡಿ ಹೇಳುತ್ತಿದ್ದೇನೆ ಎಂದು ಹೇಳುತ್ತಾರೆ. ಮು ಮಾ 4 ನ್ನು ಯಾರೂ ತೆಗೆದು ಇಟ್ಟುಕೊಂಡಿರಲಿಲ್ಲ ಅದು ಸ್ಥಳದಲ್ಲೇ ಇತ್ತು. ಘಟನೆ ನಡೆದಿದೆ ಎಂದು ಹೇಳಲಾದ ಸ್ಥಳ ಬಯಲು ಪ್ರದೇಶ.

ನಾವು ಯಾವ ವಾಹನದಲ್ಲಿ ನನ್ನ ಅಣ್ಣ ಮತ್ತು ತಂದೆಯವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದೆವು ಎಂದು ನನಗೆ ನೆನಪಿಲ್ಲ. ನನಗೆ ಅರೋಪಿತರ ಮೇಲೆ ದ್ವೇಷ ಇರುವ ಕಾರಣ ಅವರಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ರೀತಿ ಯಾವುದೇ ಘಟನೆ ನಡೆದಿರುವುದಿಲ್ಲ, ನಾನು ಯಾವುದೇ ಘಟನೆಯನ್ನು ನೋಡಿರುವುದಿಲ್ಲ, ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).